**ECA 22-23** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ- S R G, ವಕೀಲರಿಂದಃ**

2. ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು, ನನ್ನತಾಯಿ ಹಾಗೂ ತಮ್ಮ ಮನೆಯಲ್ಲಿರುತ್ತೇವೆ, ನನ್ನ ತಮ್ಮ ಶಾಲೆಗೆ ಹೋಗುತ್ತಾನೆ. ನಮ್ಮ ತಾಯಿ ಮನೆಯಲ್ಲಿರುತ್ತಾಳೆ. ನಮ್ಮ ತಾಯಿ ಕೆಲಸಕ್ಕೆ ಹೋಗುತ್ತಾಳೆ, ನಾನು ಕಾಲೇಜಿಗೆ ಹೋಗುತ್ತೇನೆ ಅಂದರೆ ಸರಿಯಲ್ಲ. ನಾನು ಹಾಜರಪಡಿಸಿದ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. ನನ್ನ ತಂದೆ ಒಂದನೇ ಎದುರುದಾರನ ಬಳಿ ಕೆಲಸಕ್ಕೆ ಹೋಗುವ ಬಗ್ಗೆ ಹಾಖಲೆ ಹಾಜರಪಡಿಸಿದ್ದು ನಮ್ಮ ತಂದೆಗೆ ಗೊತ್ತು. ನನ್ನ ತಂದೆ 1 ನೇ ಎದುರುದಾರನ ಬಳಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಅಂದರೆ ಸರಿಯಲ್ಲ. ಕೆಲಸಕ್ಕೆ ಹೋಗುತ್ತಿದ್ದಾರೆ ಅಂತಾ ಸುಳ್ಳು ಅರ್ಜಿ ಹಾಕಿದ್ದೇನೆ ಅಂದರೆ ಸರಿಯಲ್ಲ.ಒಂದು ತಿಂಗಳಿಗೆ ನಮ್ಮ ತಂದೆ 16 ಸಾವಿರ ರೂ. ದುಡಿಯುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ, ಆದರೆ ನಗದಾಗಿ ಕೊಡುತ್ತಿದ್ದರು. ಹಣ ಸ್ವೀಕಾರ ಪ್ರತಿ ಹಾಜರಪಡಿಸಿಲ್ಲ ನನ್ನ ತಂದೆ 16 ಸಾವಿರ ರೂ. ವೇತನ ದಿನಕ್ಕೆ 100/- ಭತ್ಯೆ 1 ನೇ ಎದುರುದಾರನು ಕೊಡುತ್ತಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಅಪಘಾತ ವಾದ ನಂತರ ಒಂದು ಬಾರಿ ಒಂದನೇ ಎದುರುದಾರನಿಗೆ ಬೆಟ್ಟಿಯಾಗಿ ಹಣ ಕೇಳಿದ್ದೆವು ಅವರು ಕೊಡುವುದಿಲ್ಲ ಅಂತಾ ಹೇಳಿದರು. ನಾವು ಒಂದನೇ ಎದುರುದಾರನಿಗೆ ನಮ್ಮ ತಂದೆ ತಮ್ಮ ಬಳಿ ಕೆಲಸ ಮಾಡುವ ಬಗ್ಗೆ ದಾಖಲೆ ಕೊಡಿ ಎಂದು ಕೇಳಿಲ್ಲ. ನಮ್ಮ ತಂದೆ ಒಂದನೇ ಎದುರುದಾರನ ಬಳಿ ಯಾವತ್ತೂ ಕೆಲಸಕ್ಕೆ ಹೋಗಿಲ್ಲ, ಆ ಕಾರಣದಿಂದ ಅವರು ದಾಖಲೆ ಕೊಟ್ಟಿಲ್ಲ ಅಂದರೆ, ಕೆಲಸಕ್ಕೆ ಹೋಗುತ್ತಿದ್ದರು, ಆದರೆ ದಾಖಲೆ ಕೊಟ್ಟಿಲ್ಲ. ನನ್ನ ತಂದೆ ಟ್ರ್ಯಾಕ್ಟರದಲ್ಲಿರುವ ಜೆಲ್ಲಿ ಲೋಡ ಮೇಲೆ ಕುಳಿತುಕೊಂಡಿದ್ದರು ಅಂದರೆ ಸರಿ. ಜೆಲ್ಲಿ ಯ ಮೇಲೆ ಹಮಾಲಿ ಕೆಲಸ ಮಾಡುವ ವ್ಯಕ್ತಿಗೆ ಕುಳಿತುಕೊಂಡು ಹೋಗಬಾರದು ಅಂದರೆ ಗೊತ್ತಿಲ್ಲ. ಅಪಘಾತ ದ ಕಾಲಕ್ಕೆ ನಮ್ಮ ತಂದೆ ಅನಧಿಕೃತ ಪ್ರಯಾಣಿಕರಾಗಿದ್ದರು ಅಂದರೆ ಸರಿಯಲ್ಲ. ಹಮಾಲಿಗೆ ಹಾಗೂ ಕೂಲಿಗೆ ಹೆಚ್ಚುವರಿ ಪ್ರಿಮಿಯಂ ಹಣ ಕಟ್ಟಲಾರದ ಕಾರಣ ವಿಮೆ ಕಂಪನಿ ಪರಿಹಾರ ಹಣ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ.

**ECA 22-23** **PW : 1**

ಒಂದನೇ ಎದುರುದಾರನು ನಮ್ಮ ತಂದೆ ಕೆಲಸ ಮಾಡುವ ಬಗ್ಗೆ ದಾಖಲೆ ಹಾಜರಪಡಿಸದ ಕಾರಣ ಎರಡನೇ ಎದರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ. ನಾವು ನಮ್ಮ ತಂದೆ ಅವಲಂಬನೆಯಾಗಿಲ್ಲ ಅಂದರೆ ಸರಿಯಲ್ಲ. ಮತ್ತು ನಾವು ನಮ್ಮ ತಂದೆ ವಾರಸುದಾರರು ಅಂತಾ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಟ್ರಕ್ ಚಾಲಕನ ತಪ್ಪಿನಿಂದ ಅಪಘಾತ ವಾಗಿದ್ದರಿಂದ, ಅವರಿಂದ ಪರಿಹಾರ ಪಡೆದುಕೊಳ್ಳಬಹುದು ಅಂದರೆ ಗೊತ್ತಿಲ್ಲ. ಟ್ರ್ಯಾಕ್ಟರ ಚಾಲಕನಿಗೆ ಡಿ ಎಲ್ ಇಲ್ಲದ ಕಾರಣ ಎರಡನೇ ಎದುರುದಾರರ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.